ಆ ಕಾರ್ಯಕ್ರಮಗಳ ವ್ಯವಸ್ಥೆ ಬಗ್ಗೆ ನಾವು ಒಂದು ಸಮೀಕ್ಷೆ ನಡೆಸಿ ಒಂದು ಸ್ಪಷ್ಟವಾದಂಥ ಸ್ವರೂಪದಿಂದ ಉದ್ದೇಶವನ್ನು ಪೂರ್ತಿ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಬೇಕು, ಮತ್ತು ಏನು ಅದಕ್ಕೆ ಸಮಗ್ರವಾದ ಸ್ವರೂಪ ಕೊಡಬೇಕೆಂಬುದರ ಬಗ್ಗೆ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ:– ಸನ್ಮಾನ್ಯ ಉಪಾಧ್ಯಕ್ಷೀಣಿಯವರೇ, ಈ ಗಡಿ ಪ್ರದೇಶಗಳ ಅಭಿವೃದ್ಧಿಯ ಅಡಿಯಲ್ಲಿ ಏನೇನು ಹೆಡ್ಸ್ ಬರುತ್ತವೆ ಅದರಿಂದ ಎಲ್ಲವನ್ನು ಮಾಡಲು ಆಗುವುದಿಲ್ಲ. ಈಗ ಏನಾಗುತ್ತದೆಂದರೆ ಕೆಲವು ಸಾರಿ ತುರ್ತು ಪರಿಸ್ಥಿತಿ ಬರುತ್ತದೆ. ಒಂದು ಇಪ್ಪತ್ತು ಮನೆಗಳು ಸುಟ್ಟು ಹೋಗುತ್ತವೆ, ಹೋದ ಸಲ ಅಂದರೆ 1991ನೇ ಇಸವಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಾಗಿ ಮಳೆ ಬಿದ್ದು ಕೆಲವು ರಸ್ತೆಗಳೇ ಕೊಚ್ಚಿಹೋಯಿತು. ಅಂಥ ಸಮಯದಲ್ಲಿ, ಗಡಿಪ್ರದೇಶಾಭಿವೃದ್ಧಿ ಅಡಿಯಲ್ಲಿ ಬರತಕ್ಕ ಹೆಡ್ಸ್‌ನಿಂದ ಕೆಲಸಗಳನ್ನು ಮಾಡಿಸಲು ಆಗುವುದಿಲ್ಲ. ಇದರಲ್ಲಿ ಕೆಲವು ಚಿಕ್ಕಪುಟ್ಟ ಲೋಪದೋಷಗಳಿವೆ. ಈಗ ಅದಕ್ಕೆ ಕೊಡುತ್ತಿರುವ ಹಣ ಸಾಕಾಗುವುದಿಲ್ಲ. ಅದಕ್ಕೋಸ್ಕರ ತಾವು ಮುಂದಿನ ಬಜೆಟನ್ನು ಮಂಡಿಸುವ ಮೊದಲು ಗಡಿಪ್ರದೇಶಗಳಲ್ಲಿನ ತಾಲ್ಲೂಕುಗಳ ಶಾಸಕರನ್ನು ಕರೆದು ಸಭೆಯನ್ನು ಮಾಡಿ ಅವರವರ ಲೋಪದೋಷಗಳೇನಿದೆ ಅದನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕು. ಬಜೆಟ್ ಮಂಡನೆ ಮಾಡಿದ ನಂತರ ಆ ಸಭೆಯನ್ನು ಕರೆದರೆ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಬಜೆಟ್ ಮಂಡಿಸುವ ಮೊದಲೇ ಅದು ಮಾಡಬೇಕು.

ಶ್ರೀಎಂ. ವೀರಪ್ಪ ಮೊಯಿಲಿ:– ಆ ಸಭೆಯನ್ನು ನಡೆಸಬಹುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಉಪಾಧ್ಯಕ್ಷೀಣಿಯವರೆ, ಅಂತಿಮವಾಗಿ ನನ್ನದೊಂದು ಉಪಪ್ರಶ್ನೆ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇದರ ನೀತಿಯ ಬಗ್ಗೆ ಮುಂದೆ ರಾಜ್ಯಪಾಲರ ಭಾಷಣದಲ್ಲಿ ತಿಳಿಸುತ್ತೇನೆ ಎಂದು ಭರವಸೆ ನೀಡಿದ್ದಾರೆ. ನಾನು ಮತ್ತೊಮ್ಮೆ ಅವರ ಗಮನಕ್ಕೆ ತರುತ್ತಿದ್ದೇನೆ, ಇದು ಏಕೀಕರಣವಾದಾಗಿನಿಂದಲೂ ಇವತ್ತಿನವರೆಗೆ ನಾವು ಇನ್ನೂ ಪ್ರಾಮಾಣಿಕವಾಗಿ ಹೃದಯ ಹೃದಯಗಳು ಇನ್ನೂ ಒಂದಾಗಿಲ್ಲ. ಆದುದರಿಂದ ಗಡಿಪ್ರದೇಶದಲ್ಲಿರತಕ್ಕಂಥ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರವಾಗಿಯೇ ಒಂದು ವಿಶೇಷವಾದಂಥ ಗಡಿಪ್ರಾಧಿಕಾರವನ್ನು ತಾವು ರಚನೆ ಮಾಡತಕ್ಕಂಥ ನೀತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಇದು ಒಂದನೆಯದು. ಮತ್ತೆ ಇದಕ್ಕೆ ವಿಶೇಷವಾದಂಥ ಹಣವನ್ನು ಒದಗಿಸಬೇಕು. ಸುಮ್ಮನೆ ಒಂದೊಂದು ತಾಲ್ಲೂಕಿಗೆ 25 ಲಕ್ಷ ರೂಪಾಯಿಗಳನ್ನು ಕೊಟ್ಟುಬಿಟ್ಟು ಅದರಲ್ಲಿ ರಸ್ತೆ ಮಾಡಿ, ಆಸ್ಪತ್ರೆ ಮಾಡಿ, ಮನೆ ಮಾಡಿ ಎಂದು ಹೇಳಿದರೆ ಅದು ಬದಲಾವಣೆಯಾಗುವುದಿಲ್ಲ. ಭಾವನಾತ್ಮಕವಾಗಿ, ಪರಿಣಾಮಕಾರಿಯಾಗಿ ಇಡೀ ರಾಜ್ಯದಲ್ಲಿ ನಾವೆಲ್ಲಾ ಹೊಂದಾಣಿಕೆಯಾಗಿದ್ದೇವೆ ಎನ್ನತಕ್ಕಂಥ ನೀತಿ ಸ್ವರೂಪ ಬರಬೇಕಾದರೆ ನಿಮ್ಮಲ್ಲಿ ಒಂದು ಹೊಸ ಯೋಜನೆಯನ್ನು ಅದಕ್ಕೆ ಒಂದು ಹೊಸ ನೀತಿಯನ್ನು ಸ್ಪಷ್ಟವಾಗಿ ಹಾಕಬೇಕು. ಈ ಕೆಲಸವನ್ನು ತಾವು ಮಾಡುತ್ತೀರ ಎಂದು ನಾನು ಅತ್ಯಂತ ಪ್ರಾಮಾಣಿಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಅದರ ನೀತಿಯನ್ನು ನಾವು ಘೋಷಣೆ ಮಾಡುವಾಗ ಅಥವಾ ಅದನ್ನು ರೂಪಿಸುವಾಗ ತಮ್ಮ ಸಲಹೆ ಏನು ಇದೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ತಿಪ್ಪಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಬೆಳೆದಿರುವ ಹಣ್ಣು ಮತ್ತು ತೆಂಗಿನಕಾಯಿಗಳ ಹರಾಜು

(623) ಶ್ರೀ ಆಂಜನಮೂರ್ತಿ (ನೆಲಮಂಗಲ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1991–92ನೇ ಸಾಲಿನಲ್ಲಿ ನೆಲಮಂಗಲ ತಾಲ್ಲೂಕು ತಿಪ್ಪಗೊಂಡನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ಬೆಳೆದಿರುವ ಹಣ್ಣು ಮತ್ತು ತೆಂಗಿನಕಾಯಿಗಳನ್ನು ನಿಯಮದ ರೀತಿ ಬಹಿರಂಗ ಹರಾಜು ಮಾಡಲಾಗಿದೆಯೇ ?

2) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

3) 1989ರಿಂದ 1992ರವರೆಗೆ ಮೇಲ್ಕಂಡ ಕ್ಷೇತ್ರದಿಂದ ಬಹಿರಂಗ ಹರಾಜಿನಿಂದ ಬಂದ ಹಣವೆಷ್ಟು ?

4. 1991–92ನೇ ಸಾಲಿನಲ್ಲಿ ಮೇಲ್ಕಂಡ ತೋಟಗಾರಿಕೆ ಕ್ಷೇತ್ರದಲ್ಲಿ ಅವ್ಯವಹಾರ ನಡೆದಿರುವ ಅಧಿಕಾರಿಯ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎನ್. ಹುಚಮಾಸ್ತಿ ಗೌಡ (ಕೃಷಿ ಸಚಿವರು)

1) ಸೀಬೆ ಮತ್ತು ಸಪೋಟ ಹಣ್ಣುಗಳನ್ನು ನಿಯಮದ ರೀತಿ ಬಹಿರಂಗ ಹರಾಜು ಮಾಡಲಾಗಿದೆ. ತೆಂಗಿನಕಾಯಿಗಳನ್ನು ಮಾತ್ರ ಇಲಾಖಾ ದರದಲ್ಲಿ ಸ್ಥಳೀಯವಾಗಿ ಮಾರಾಟ ಮಾಡಲಾಗಿದೆ.

2)ತೆಂಗಿನ ಕಾಯಿ ಫಸಲು ವರ್ಷವಿಡೀ ಬರುತ್ತಿರುವುದರಿಂದ ತೆಂಗಿನ ಕಾಯಿಗಳನ್ನು ತೋಟಗಾರಿಕೆ ಇಲಾಖೆಯೇ ಕಿತ್ತು ಸ್ಥಳೀಯ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಿರುತ್ತದೆ.

3) 1989–90ನೇ ಸಾಲಿಗೆ ರೂ.1,45,092–00
1990–91ನೇಸಾಲಿಗೆ ರೂ. 2,54,310–00
1991–92ನೇ ಸಾಲಿಗೆ ರೂ. 1,85,333–00

4) ಮೇಲ್ಕಂಡ ತೋಟಗಾರಿಕೆ ಕ್ಷೇತ್ರದಲ್ಲಿ ಹರಾಜಿನ ಮಾರಾಟದ ಬಗ್ಗೆ ಅಥವಾ ಅವ್ಯವಹಾರದ ಬಗ್ಗೆ ಯಾವ ದೂರುಗಳು ಬಂದಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಅಂಜನಮೂರ್ತಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಸನ್ಮಾನ್ಯ ಮಂತ್ರಿಗಳನ್ನು ಕೇಳಬಯಸುವುದೇನೆಂದರೆ, ಈ ಮಾಹಿತಿಯನ್ನು ಒದಗಿಸುವುದಕ್ಕೆ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಅಥವಾ ಅವರ ವತಿಯಿಂದ ಯಾರಾದರೂ ಸ್ಥಳ ಪರೀಕ್ಷೆ ಮಾಡಿ ಮಾಹಿತಿಯನ್ನು ಒದಗಿಸಿದ್ದಾರೆಯೇ ? ಕಾರಣ, ಅಲ್ಲಿ ಸುಮಾರು 50–60 ಎಕರೆಯಷ್ಟು ಭೂಮಿ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಿರುವುದಿದೆ. ಆದರಲ್ಲಿ ಸಪೋಟ, ತೆಂಗಿನಕಾಯಿ ಮತ್ತು ಸೀಬೆಹಣ್ಣು ಇನ್ನೂ ಅನೇಕ ವಿಧವಾದ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ಅಲ್ಲಿ ಯಾವ ಒಂದು ವಿಧವಾದ ಕಾನೂನಿನ ರೀತಿಯಲ್ಲಿ ಅದನ್ನು ಹರಾಜುಮಾಡುತ್ತಿಲ್ಲ. ಅವರು ಏನಾದರೂ ಇಲಾಖೆಯ ವತಿಯಿಂದ ಮಾಹಿತಿ ಕೊಟ್ಟಿರುವುದಾದರೆ ಸ್ಥಳ ಪರೀಕ್ಷೆ ಮಾಡದೆ ಕೊಟ್ಟಿದ್ದಾರೆ. ಅಲ್ಲಿ ನೀರನ್ನು ಹಾಯಿಸಲು ಸಾವಿರಾರು ರೂಪಾಯಿಗಳ ಕೊಳವೆಗಳು ಇವೆ. ಅವುಗಳೆಲ್ಲವನ್ನು ಮಾರಿಕೊಂಡಿದ್ದಾರೆ. 1989–90ನೇ ಸಾಲಿನಲ್ಲಿ 1,45,000 ರೂಪಾಯಿಗಳ ಆದಾಯ ಬಂದಿದೆ, 1990–91ನೇ ಇಸವಿಯಲ್ಲಿ 2,54,000 ರೂಪಾಯಿಗಳ ಆದಾಯ ಬಂದಿದೆ, ಆದರೆ 1991–92ರಲ್ಲಿ ಅದು ಒಂದು ಲಕ್ಷಕ್ಕೆ ಇಳಿದಿದೆ. ನನ್ನ ಮೂಲವಾದ ಪ್ರಶ್ನೆ ಏನೆಂದರೆ 1991–92ನೇ ಸಾಲಿನಲ್ಲಿ ಅವ್ಯವಹಾರ ನಡೆದಿದೆ, ಅಲ್ಲಿ ಕಾನೂನಿನ ರೀತಿಯಲ್ಲಿ ಹರಾಜನ್ನು ಮಾಡಿಲ್ಲ, ಅಲ್ಲಿನ ಉತ್ಪನ್ನವನ್ನು ಮಾರಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಉಪಾಧ್ಯಕ್ಷಿಣಿಯವರೇ, ತೆಂಗಿನಕಾಯಿಗಳು ಯಾವಾಗ

ಬೀಳುತ್ತವೆಯೋ ಅಥವಾ ಕೆಡವಿದಾಗ ಅಲ್ಲಿ ಜಾಸ್ತಿ ತೆಂಗಿನ ಮರಗಳು ಇಲ್ಲದಿರುವುದರಿಂದ ಹೆಚ್ಚು ಕಾಯಿಗಳು ಅಲ್ಲಿ ದೊರೆಯದೇ ಇರುವುದರಿಂದ ಪ್ರತಿದಿನ ಅಥವಾ ನಾಲ್ಕು ದಿನಕ್ಕೆ ಒಂದು ಸಾರಿ, ಎಂಟು ದಿನಕ್ಕೊಂದು ಸಾರಿ ಅಂಗಡಿಗಳಿಗೆ ಮಾರಿಬಿಡಬಹುದು ಎನ್ನತಕ್ಕಂಥ ಪರಿಸ್ಥಿತಿ ಇದೆ. ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾತನಾಡಿ ಅವರಿಗೆ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಎಷ್ಟೇ ದಿನವಾಗಲಿ ತೆಂಗಿನ ಕಾಯಿಗಳನ್ನು ಕೆಡವಿದ ಮೇಲೆ ಕನಿಷ್ಠ ಪಕ್ಷ 100 ಕಾಯಿಯಾದರೂ ಕೂಡ ಒಂದೇ ದಿನ ಹರಾಜು ಮಾಡಿದರೆ ಪರವಾಗಿಲ್ಲ, ಅದರಿಂದ ಸ್ವಲ್ಪ ಹಣಬರಬಹುದು. ಈಗ ಅವರು ನಡೆಸುತ್ತಿರುವ ಪದ್ಧತಿಯಲ್ಲಿ ಒಂದು ತೆಂಗಿನ ಕಾಯಿಗೆ 3 ರೂಪಾಯಿ ಬೆಲೆ ಬೀಳುತ್ತದೆ. ಈ ಲೆಕ್ಕದ ಪ್ರಕಾರ ಹರಾಜು ಮಾಡುತ್ತಿದ್ದಾರೆ. ಕೊನೇಪಕ್ಷ 100–200 ತೆಂಗಿನ ಕಾಯಿಗಳು ಬಂದಾಗ ಮಾತ್ರ ಹರಾಜು ಮಾಡಬೇಕೆಂದು ನಾನು ಅವರಿಗೆ ಸಲಹೆ ಕೊಟ್ಟಿದ್ದೇನೆ. ಈ ರೀತಿ ಮಾಡಿದರೆ ಹೆಚ್ಚು ಹಣ ಬರುತ್ತದೆ. ಇನ್ನು ಉಳಿದ ಹಣ್ಣುಗಳಿಗೆ ಮಾರ್ಕೆಟಿನಲ್ಲಿ ಒಂದೇ ರೀತಿಯ ರೇಟು ಇರುವುದಿಲ್ಲ. ರೇಟು ಒಂದು ದಿವಸ ಜಾಸ್ತಿಯಾಗುತ್ತದೆ, ಇನ್ನೊಂದು ದಿವಸ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಹರಾಜು ಮಾಡಿದ ಹಣ್ಣಿನಿಂದ ಬರತಕ್ಕ ಹಣದಲ್ಲಿ ಹೆಚ್ಚು ವ್ಯತ್ಯಾಸವೇನೂ ಇಲ್ಲ. ತೆಂಗಿನಕಾಯಿಯಲ್ಲಿ ವ್ಯತ್ಯಾಸ ಬರುತ್ತದೆ. ಆದ್ದರಿಂದ ನಾನು ಅವರಿಗೆ ಒಂದು ಸಲಹೆಯನ್ನು ಕೊಟ್ಟು ಇನ್ನು ಮುಂದೆ ಎಲ್ಲ ಕಾಯಿಗಳನ್ನೂ ಒಟ್ಟಿಗೆ ಸಂಗ್ರಹಿಸಿ ಹರಾಜು ಮಾಡಬೇಕೆಂದು ಹೇಳಿದ್ದೇನೆ. ಅದರ ಪ್ರಕಾರ ಮಾಡಿದರೆ 1990–91ನೇ ಸಾಲಿನಲ್ಲಿ ಬಂದಿರುವ ಆದಾಯಕ್ಕಿಂತ ಹೆಚ್ಚಿಗೆ ಆದಾಯ ಬರುತ್ತದೆಂದು ನನ್ನ ಉತ್ತರ.

ಶ್ರೀ ಆಂಜನಮೂರ್ತಿ:– ಅಲ್ಲಿ ಎಷ್ಟು ತೆಂಗಿನ ಸಸಿಗಳಿವೆ, ಎಷ್ಟು ಸಪೋಟ ಗಿಡಗಳಿವೆ, ಎಷ್ಟು ಸೀಬೆ ಗಿಡಗಳಿವೆ ಎಂಬುದನ್ನು ಪರೀಕ್ಷೆ ಮಾಡಿದ್ದಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಅಲ್ಲಿ ಎಷ್ಟು ಸಪೋಟ ಗಿಡಗಳಿವೆ, ಎಷ್ಟು ಸೀಬೆಗಿಡಗಳಿವೆ, ಎಂಬುದನ್ನು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಗಿಡದಲ್ಲಿ ಕಾಯಿಗಳು ಇದ್ದಾಗಲೇ ಹರಾಜು ಮಾಡುತ್ತಾರೆ. ಯಾರು ಹೆಚ್ಚು ಹರಾಜು ಕೂಗುತ್ತಾರೆ ಎಂಬುದರ ಮೇಲೆ ಇದು ತೀರ್ಮಾನ ಆಗುತ್ತದೆಯೇ ಹೊರತು ಅಲ್ಲಿ ಎಷ್ಟು ಗಿಡಗಳಿವೆ, ಎಷ್ಟು ಕಾಯಿ ಬಿಡುತ್ತವೆ ಎಂಬುದರ ಮೇಲೆ ನಾವು ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಉಪಾಧ್ಯಕ್ಷಿಣಿಯವರು:– ರಾಮಯ್ಯನವರೇ ನಿಮ್ಮ 245ನೇ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದೇನೆ. ಇಲಾಖೆಯಿಂದ ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಆದ್ದರಿಂದ ಈ ನಿಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ಪ್ರಶ್ನೆಯ ಬಗ್ಗೆ ಮಾನ್ಯ ಸದಸ್ಯರ ಜೊತೆಗೆ ಮತ್ತು ಮಾನ್ಯ ವಿರೋಧಪಕ್ಷದ ನಾಯಕರ ಜೊತೆಗೆ ನಾನು ಮಾತನಾಡಿದ್ದೇನೆ. ಇದರ ಬಗ್ಗೆ ಅವರ ಜೊತೆ ಪ್ರತ್ಯೇಕವಾಗಿ ಸಮಾಲೋಚನೆ ಮಾಡಿ ಅವರ ಸಲಹೆಯನ್ನು ತೆಗೆದುಕೊಂಡು ಅನಂತರ ಉತ್ತರ ಕೊಡುತ್ತೇನೆ.

ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಸಂಖ್ಯೆ

(309) ಶ್ರೀ ಸಿ. ಬೈರೇಗೌಡ (ವೇಮಗಲ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿರುವ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು ಮತ್ತು ಮೇಲ್ಕಂಡ ಸಾರ್ವಜನಿಕ ಉದ್ದಿಮೆಗಳ ಮೇಲೆ ಹೂಡಿರುವ ಬಂಡವಾಳವೆಷ್ಟು ?